ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 5, Mar-Apr 2020, 99-103
©*IIMRD*, Mysuru
IIMRD JOURNALS
www.iimrd.com

# ಜಾನಪದ ಸಂಸ್ಕೃತಿ ಮತ್ತು ಕಲೆಗಳು: ಚಿಕ್ಕಮಗಳೂರು ತಾಲೂಕನ್ನು ಅನುಲಕ್ಷಿಸಿ

ಚಂದ್ರಶೇಖರ ಎಸ್.ಡಿ[1]

**ಪೀಠಿಕೆ**

ಭಾರತ ದೇಶವು ವೈವಿಧ್ಯ ಸಂಸ್ಕೃತಿಗಳ ನೆಲೆವೀಡು. ಈ ನಮ್ಮ ದೇಶದಲ್ಲಿ ಪ್ರಾದೇಶಿಕವಾರು ಹಲವಾರು ಸಮುದಾಯಗಳು ವಾಸವಿದ್ದು, ಪ್ರತಿಯೊಂದು ಸಮುದಾಯವು ಕೂಡ ತಮ್ಮದೇಯಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ ಪದ್ಧತಿಯನ್ನು ಅಳವಡಿಕೊಂಡು ಜೀವನ ನಡೆಸುತ್ತಿದ್ದಾರೆ. ತನ್ನದೇ ಸಂಸ್ಕೃತಿಯಿಂದ ಗುರುತಿಸಿ ಕೊಂಡು ಬಂದಿವೆ. ವೇಗವಾಗಿ ಬದಲಾಗುತ್ತಿರುವ ಜೀವನಶೈಲಿಯಲ್ಲಿ ಇಂದಿಗೂ ಕೂಡ ಬಹುತೇಕ ಸಮುದಾಯಗಳು ತಮ್ಮ ಸಾಂಸ್ಕೃತಿ–ಧಾರ್ಮಿಕ ಆಚರಣೆಗಳನ್ನು ಅನುಸರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಈ ಸಾಂಸ್ಕೃತಿಕ ಆಚರಣೆ ಅಥವ ಕಲೆಗಳು ಪ್ರದೇಶದಿಂದ ಪ್ರದೇಶಕ್ಕೆ, ಸಮುದಾಯದಿಂದ ಸಮುದಾಯಕ್ಕೆ ವಿಶಿಷ್ಟತೆಯನ್ನು ಹೊಂದಿರುತ್ತದೆ. ಅಂತಹ ಕಲಾ ಪ್ರಕಾರಗಳಲ್ಲಿ ಜನಪದ ಕಲೆಗಳು ಅತ್ಯಂತ ಪ್ರಮುಖವಾದವುಗಳು.

ಕರ್ನಾಟಕದ ಉದಾಹರಣೆಯನ್ನೆ ತೆಗೆದುಕೊಳ್ಳುವುದಾದರೆ ಮೈಸೂರು ಚಾಮರಾಜನಗರ ಭಾಗದಲ್ಲಿ ಕಂಸಾಳೆ, ನೀಲಗಾರರ ಹಾಡು, ಮಹದೇಶ್ವರನ ಪುರಾಣಕಥೆ, ಡೊಳ್ಳುಕುಣಿತಗಳನ್ನು ನೋಡಬಹುದಾದರೆ ಇದೇ ಭಾಗದ ಸೋಲಿಗ ಸಮುದಾಯದ ಗೊರುಕನ ಕುಣಿತ ವಿಶಿಷ್ಟವಾದುದಾಗಿದೆ. ಬೆಂಗಳೂರು ಭಾಗದಲ್ಲಿ ಕರಗ ಉತ್ಸವ ಪ್ರಮುಖವಾದುದು. ಹೇಳುತ್ತಾ ಹೋದರೆ ಪುಟಗಳು ಸಾಲದು ಅಷ್ಟೊಂದು ಜನಪದ ಕಲಾಪ್ರಕಾರಗಳಿವೆ.  ಹೀಗೆ ಪ್ರತಿ ಪ್ರದೇಶ ಮತ್ತು ಪ್ರತಿ ಸಮುದಾಯದಲ್ಲಿಯೂ ಕೂಡ ಜನಪದ ಕಲೆಗಳು ವಿಶಿಷ್ಟವಾಗಿದ್ದು, ಕವಿರಾಜ ಮಾರ್ಗಕಾರ ಹೇಳಿದಂತೆ "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಎಂಬಂತೆ ಎಲ್ಲಾ ಕಾಲಗಳಲ್ಲಿಯೂ ನಿರೂಪಿತವಾಗಿದ್ದು ಇಲ್ಲಿನ ಪ್ರದೇಶವಾರು ಸಮುದಾಯ ಮತ್ತು ಭಾಷೆಯು ಒಬ್ಬ ಕಾವ್ಯ ರಚನಾಕಾರನಾಗುವಂತೆ ಸಂಸ್ಕೃತಿಯ ಬೆಳವಣಿಗೆಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಕಾರಣವಾಗಿದೆ. ಹಾಗಾಗಿ ಪ್ರಸ್ತುತ ಲೇಖನದಲ್ಲಿ ಚಿಕ್ಕಮಗಳೂರು ತಾಲೂಕಿನ ಜನಪದ ಕಲೆಗಳ ಬಗ್ಗೆ ವಿವರಿಸಲಾಗಿದೆ.

## ಅಧ್ಯಯನ ಕ್ಷೇತ್ರ

ನಮ್ಮ ರಾಜ್ಯವನ್ನು ಪ್ರಾದೇಶಿಕವಾಗಿ ಕರಾವಳಿ, ಬಯಲುಸೀಮೆ, ಮಲೆನಾಡು ಎಂಬುದಾಗಿ ಮೂರು ವಲಯಗಳಾಗಿ ವಿಂಗಡಿಸಬಹುದಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಚಿಕ್ಕಮಗಳೂರು ಮಲೆನಾಡು ಪ್ರದೇಶದಲ್ಲಿ ಕಂಡು ಬರುತ್ತದೆ.  ಇದು ಪಶ್ಚಿಮ ಘಟ್ಟಗಳ ತಪ್ಪಲಿನ

[1] *ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.*

ಪ್ರದೇಶದಲ್ಲಿದ್ದು, ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಗೆ ಒಳಪಡುತ್ತದೆ. ಮಲೆನಾಡಿನ ಜಿಲ್ಲೆಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯು ಪ್ರಸಿದ್ಧವಾದ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಒಟ್ಟು ಏಳು ತಾಲೂಕುಗಳಿದ್ದವು, ಕಳಸ ಎಂಬ ಪಟ್ಟಣವನ್ನು ಹೊಸ ತಾಲೂಕನ್ನಾಗಿ ಸರ್ಕಾರ ಘೋಷಣೆ ಮಾಡಿದ್ದು ಪ್ರಸ್ತುತ ಎಂಟು ತಾಲೂಕುಗಳಿವೆ.

ಚಿಕ್ಕಮಗಳೂರು ತಾಲೂಕನ್ನು ರುಕ್ಮಾಂಗದ ಎಂಬ ರಾಜ ಆಳ್ವಿಕೆ ಮಾಡುತ್ತಿದ್ದುದು ವಿಶೇಷ. ಈ ತಾಲೂಕಿನಲ್ಲಿ ಆಲೂರು, ಅಂಬಳೆ, ಆಹುತಿ, ಕಸಬಾ, ಜಾಗರ, ಖಾಂಡ್ಯ, ಲಕ್ಯಾ, ವಸ್ತರೆ ಎಂಬ ಎಂಟು ಹೋಬಳಿಯನ್ನು ಹೊಂದಿದೆ. ಇಲ್ಲಿ ಕಡಿಮೆ ಜನಸಂಖ್ಯೆಯಿದ್ದರೂ ಕೂಡ ಶೇ.83.7 ರಷ್ಟು ಸಾಕ್ಷರತೆಯನ್ನು ಹೊಂದಿದೆ. ಇದು ರಾಜ್ಯದ ರಾಜಧಾನಿಯಿಂದ 250 ಕಿ.ಮೀ. ದೂರದಲ್ಲಿದ್ದು, ಸಮುದ್ರ ಮಟ್ಟದಿಂದ 3,580 ಅಡಿ ಎತ್ತರದ ಪ್ರದೇಶದಿಂದ ಕೂಡಿದೆ. ಇದಕ್ಕೆ ಸಂಬಂಧಪಟ್ಟಂತೆ ಮುಳ್ಳಯ್ಯನಗಿರಿ ಪ್ರದೇಶವು ಕರ್ನಾಟಕದ ಅತ್ಯಂತ ಎತ್ತರವಾದ ಪ್ರದೇಶವಾಗಿದೆ. ಇಲ್ಲಿ ಅನೇಕ ನದಿಗಳು ಹರಿಯುತ್ತಿದ್ದು ತುಂಗಾಭದ್ರ, ಹೇಮಾವತಿ, ವೇದಾವತಿ, ಯಗಚಿ ಪ್ರಮುಖವಾಗಿವೆ. ಬಹುಮುಖ್ಯವಾಗಿ ಕಾಫಿ ಇಲ್ಲಿನ ವಾಣಿಜ್ಯ ಬೆಳೆಯಾಗಿದ್ದು ಕಾಫಿನಾಡು ಎಂಬ ಪ್ರಸಿದ್ಧಿಯನ್ನು ಪಡೆದಿದೆ.

ಚಿಕ್ಕಮಗಳೂರು ಎಂದಾಗ ನೆನಪಾಗುವುದು ಇಲ್ಲಿಯ ಪ್ರೇಕ್ಷಣಿಯ ಸ್ಥಳಗಳು ಮಲೆನಾಡು ಕೇವಲ ಪ್ರವಾಸೋದ್ಯಮ ಚಟುವಟಿಕೆಗಳ ಕೇಂದ್ರವಾಗಿರದೆ. ಇಲ್ಲಿನ ಸಂಸ್ಕೃತಿಯು ಸಂಶೋಧಕರಿಗೆ/ ಅಧ್ಯಯನಕಾರರಿಗೆ ಮಾಹಿತಿಯ ಕಣಜ ಎಂದರೆ ತಪ್ಪಾಗಲಾರದು. ಇಲ್ಲಿನ ಬೆಟ್ಟ, ಗುಡ್ಡ, ಅರಣ್ಯ ಪ್ರದೇಶದಲ್ಲಿರುವ ವಿಶಿಷ್ಟ ಸಂಸ್ಕೃತಿ, ಜನರ ನಂಬಿಕೆ, ಆಚರಣೆಗಳು ಬಹುಮುಖ್ಯವಾಗಿದ್ದು ಆಧುನಿಕ ತಂತ್ರಜ್ಞಾನ ವ್ಯವಸ್ಥೆಯಲ್ಲಿಯೂ ಕೂಡ ತನ್ನದೇ ವಿವಿಧ ಆಚರಣೆಗಳ ಮೂಲಕ ಗಮನ ಸೆಳೆಯುತ್ತದೆ. ತಾಲೂಕಿನ ಬಹುಮುಖ್ಯ ವಿಶೇಷತೆಯೆಂದರೆ ಬಯಲುಸೀಮೆಯ ಹಾಗೂ ಕರಾವಳಿ ಪ್ರದೇಶದ ಜೀವನ ಕ್ರಮ ಎಂದರೆ ಬದುಕಿನ ಧರ್ಮ, ಆರ್ಥಿಕತೆ, ವೃತ್ತಿಗಳು, ನೀತಿ–ರೀತಿಗಳು, ನಂಬಿಕೆ–ಸಾಂಪ್ರದಾಯಗಳು, ಆಚರಣೆಗಳು, ಆಹಾರ–ಪಾನಿಯಗಳು, ಕಲೆಗಳು ಮತ್ತು ಇವುಗಳಿಗೆ ಪೂರಕವಾದ ಭೌತಿಕ ವಸ್ತುಗಳು ಭೌದ್ಧಿಕ ಚಿಂತನೆಗಳು ಇವೆಲ್ಲವೂ ಸಂಸ್ಕೃತಿ ಎಂಬ ಪರಿಕಲ್ಪನೆಯೊಳಗೆ ಸೇರಿರುತ್ತವೆ. ಚಿಕ್ಕಮಗಳೂರು ತಾಲೂಕನ್ನು ಕೇವಲ ಪ್ರವಾಸಿ ತಾಣವಾಗಿ ನೋಡದೆ ಅಲ್ಲಿನ ಜಾನಪದೀಯ ಕಲೆಗಳು ಕೂಡ ಸಂಸ್ಕೃತಿಯ ಅನಾವರಣವೂ ಕಾವ್ಯವಾಗಬಹುದಾಗಿದೆ.

**ತಾಲೂಕಿನ ಸಾಂಸ್ಕೃತಿಕ ಆಚರಣೆ ಮತ್ತು ಜನಪದ ಕಲೆಗಳು**

ಜನಪದ ಕಲೆ ಮತ್ತು ಸಂಸ್ಕೃತಿ ಮನುಷ್ಯನಷ್ಟೇ ಪ್ರಾಚೀನವಾದವು ಪರಿಸರ ಪರಿವೀಕ್ಷಣೆಯಿಂದ ಅನುಕರಣೆಯಿಂದ ಕಲಿತದ್ದನ್ನು ಒಂದೆಡೆ ದಾಖಲಿಸಬೇಕೆಂಬ ಮನುಷ್ಯ ಸಹಜ ಗುಣವಾದ ಇಂಥ ಕಲೆಗಳು ಅಸ್ತಿತ್ವಕ್ಕೆ ಬಂದಿವೆ. ಜನಪದ ಕಲೆ ಮತ್ತು ಕಲಾವಿದರು ಗ್ರಾಮೀಣ ಭಾರತದ ತಾಯಿ ಬೇರುಗಳಿದ್ದಂತೆ ಜನಜೀವನ ಮತ್ತು ಉನ್ನತ ಸಾಂಸ್ಕೃತಿಕ ಪರಂಪರೆ ಬಿಂಬಿಸುವ ಜನಪದ ಕಲೆಗಳು ಗ್ರಾಮೀಣ ಭಾರತದ ಜೀವಾಳವಾಗಿವೆ.

**ಆರಾಧ್ಯ ದೈವಗಳು**

ಹಿರೇಮಗಳೂರಿನ ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನವು ಈ ಪ್ರದೇಶದ ಪ್ರಮುಖ ಆರಾಧ್ಯ ದೈವ ಈ ದೇವರ ಪೂಜಾರಿ ಕನ್ನಡದ ಪೂಜಾರಿ ಶ್ರೀ ಹಿರೇಮಗಳೂರು ಕಣ್ಣನ್ ಕನ್ನಡದ ಶ್ರೇಷ್ಠ ವ್ಯಕ್ತಿಗಳಲ್ಲಿ ಇವರೂ ಕೂಡ ಒಬ್ಬರು ಪ್ರತಿ ವರ್ಷ ಫೆಬ್ರವರಿ ತಿಂಗಳಿನಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಈ ಸಂದರ್ಭದಲ್ಲಿ ಹಲವಾರು ಜನಪದ ಕಲೆಗಳ ಅನಾವರಣ ಪೂಜಾ ವಿಧಿ ವಿಧಾನಗಳು ಈ ಸಂದರ್ಭಗಳಲ್ಲಿ ಕಾಣಸಿಗುತ್ತವೆ.

ಹೊಯ್ಸಳರ ಕಾಲದಲ್ಲಿ ಈ ದೇವಸ್ಥಾನ ಪ್ರಾರಂಭವಾಗಿದ್ದು ರಾಮ ಲಕ್ಷ್ಮಣ, ಸೀತೆ ಇಲ್ಲಿರುವ ದೇವರ ವಿಗ್ರಹಗಳು, ಶ್ರೀಕೃಷ್ಣ ದೇವಾಲಯ, ಮಳಲೂರಮ್ಮ ದೇವಸ್ಥಾನ, ಶ್ರೀವೆಂಕಟೇಶ್ವರ ಸ್ವಾಮಿ ದೇವಾಲಯ, ಚಿಂತಾಮಣಿ ಸರಸ್ವತಿ ದೇವಾಲಯ, ಶ್ರೀರಾಮಾಂಜನೇಯ ದೇವಾಲಯ, ರಾಮೇಶ್ವರ ದೇವಾಲಯ, ಶನೀಶ್ವರ ದೇವಾಲಯ, ಬಲ್ಮುರಿ ಗಣಪತಿ, ಆದಿಬೂತಪ್ಪನ ದೇವಾಲಯ ಕಾಮದೇನು ಮಹಾಶಕ್ತಿ ದೇವಾಲಯ, ಗಣಪತಿ ದೇವಾಲಯ, ಶಿವ ದೇವಾಲಯ ಇನ್ನೂ ಮುಂತಾದ ಆರಾಧ್ಯ ದೈವಗಳು ಈ ಪ್ರದೇಶದಲ್ಲಿ ಪೂಜಿಸಲ್ಪಡುತ್ತಿವೆ.

**ಸುಗ್ಗಿ ಹಬ್ಬ**

ಕರ್ನಾಟಕದ ಬಹುತೇಕ ಭಾಗಗಳಲ್ಲಿ ಆಚರಣೆಯಲ್ಲಿರುವ ಪ್ರಕ್ರಿಯೆ ಹಾಗೆ ನೋಡಿದರೆ ಬಯಲು ನಾಡಿನ ಅನೇಕ ಗ್ರಾಮಗಳಲ್ಲಿ ದೇವತೆಗಳ ಜಾತ್ರೆಗಳು ಸುಗ್ಗಿ ಸಂಭ್ರಮದ ಜೊತೆಗೆ ತಳುಕು ಹಾಕಿಕೊಂಡಿವೆ. ಹೋಳಿ ಹಬ್ಬಕ್ಕೂ ಸುಗ್ಗಿಯ ಆಚರಣೆಗೂ ಅಂತಹ ವ್ಯತ್ಯಾಸಗಳು ಇಲ್ಲ. ಮಲೆನಾಡಿನ ಸುಗ್ಗಿ ಹಬ್ಬಕ್ಕೂ ಬಯಲುಸೀಮೆಯ ಸುಗ್ಗಿ ಹಬ್ಬಕ್ಕೂ ವ್ಯತ್ಯಾಸವಿದೆ. ಮಲೆನಾಡಿನ ಸುಗ್ಗಿಯ ಹಬ್ಬದ ವೇಷಭೂಷಣವು ಧರಿಸಿದ ಕೋಲು ಮೇಳದ ಕಲಾವಿದರ ಕೈಯಲ್ಲಿ ಕೋಲುಗಳನ್ನುಹಿಡಿದು ಹಿಮ್ಮೇಳದ ವಾದ್ಯದ ಗತ್ತಿಗನುಗುಣವಾಗಿ ಪದಗಳನ್ನು ಪದಗಾರರು ಹಾಡುತ್ತಾರೆ. ಕಲಾವಿದರು ಕುಣಿಯುತ್ತಾರೆ.

**ಡೊಳ್ಳು ಕುಣಿತ**

ಈ ಭಾಗದ ಜನಪದ ಕಲೆಗಳಲ್ಲಿ ಡೊಳ್ಳು ಕುಣಿತವು ಕೂಡ ಜನಪದ ಕಲೆಯ ಪ್ರಕಾರವಾಗಿದೆ. ಇದು ಜನಪದ ಕಲೆಗಳಲ್ಲಿ ಗಂಡುಕಲೆ ಎನಿಸಿರುವ ಡೊಳ್ಳು ಕುಣಿತ ಪುರುಷರಿಗೆ ಮೀಸಲಾದ ಕಲೆ ಒಳ್ಳೆಯ ಮೈಕಟ್ಟು ಮತ್ತು ಶಕ್ತಿಯುಳ್ಳ ಕಲಾವಿದರು ಮಾತ್ರ ಈ ಕಲೆಯನ್ನು ಪ್ರದರ್ಶಿಸಬಲ್ಲರು ತನ್ನ ವಿಶಿಷ್ಟ ಶೈಲಿಯಿಂದ ಉಳಿದುಕೊಂಡು ಬಂದಿರುವ ಈ ಕಲೆಯು ಈ ಭಾಗದ ಮೂಲ ಕಲೆಯಾಗದಿದ್ದರೂ ಪಕ್ಕದ ಪ್ರದೇಶಗಳಿಂದ ಪ್ರಭಾವಿತಗೊಂಡು ಪ್ರದರ್ಶನಗೊಳ್ಳುತ್ತಿರುವ ಕಲೆಯಾಗಿದೆ. ಇದು ಶಾಸ್ತ್ರೀಯ ಕಲೆ ನೃತ್ಯ ಡೊಳ್ಳು ಬಾರಿಸಿಕೊಂಡು ಕುಣಿಯುವುದರಿಂದ ಇದಕ್ಕೆ ಡೊಳ್ಳು ಕುಣಿತ ಎಂಬ ಹೆಸರು ಮೂಲತಃ ಕುರುಬ ಜನಾಂಗದ ವಾದ್ಯವಾಗಿರುವ ಡೊಳ್ಳು ಹಳ್ಳಿಯ ಸಂಸ್ಕೃತಿ ಜೀವನ ನೋವಿಗೆ ಸಾಮರಸ್ಯವಾಗಿ ಬೆರೆತುಕೊಂಡಿದೆ. ಡೊಳ್ಳಿನ ಉತ್ಪತ್ತಿಯ ಬಗ್ಗೆ ಹಲವು ಕಥೆಗಳು ರೂಡಿಯಲ್ಲಿರುವುದರಿಂದ ಅದರ ಬಗ್ಗೆ ಭಕ್ತಿ ಗೌರವಗಳು ವ್ಯಕ್ತವಾಗುತ್ತವೆ.

**ವೀರಗಾಸೆ**

ಸಾಮೂಹಿಕ ನೃತ್ಯವನ್ನೊಳಗೊಂಡ ಕರ್ನಾಟಕದ ಒಂದು ಜನಪದ ಕಲೆ ಶೈವ ಸಂಪ್ರದಾಯದ ಧಾರ್ಮಿಕ ವೀರ ನೃತ್ಯದ ನಡುವೆ ಕನಿಷ್ಠ ಎಂಟು ಜನ ಕಲಾವಿದರೂಗಳು ಸೇರಿ ಒಡಪು ಹೇಳುವ ಕಾರ್ಯಕ್ರಮ ನಡೆಸಿಕೊಟ್ಟರೆ ಗರಿಷ್ಠ ಮೂವತ್ತು ಮಂದಿ ಇದರಲ್ಲಿ ಭಾಗವಹಿಸುವರು. ಶೃತಿ, ಚಮಾಳ (ಹಿಮ್ಮೇಳ) ಓಲಗ ಅಥವಾ ಮೌರಿ, ಕರಡೆವಾದ್ಯ ಈ ಪಂಚ ವಾದ್ಯಗಳು ಇಲ್ಲಿ ಬಳಕೆಯಾಗುತ್ತಿವೆ. ಕರಡೆ ಈ ಕುಣಿತದಲ್ಲಿ ಅನಿವಾರ್ಯ ವಾದ್ಯ ಎನಿಸಿದೆ.

**ಕರಪಾಲ ಮೇಳ**

ಈ ಕರಪಾಲ ಮೇಳವು ಹವ್ಯಾಸಿ ಕಲೆಯೂ ಹೌದು ಉದ್ಯೋಗಿ ಕಲೆಯೂ ಹೌದು ಇದರಲ್ಲಿ ವೀರಶೈವರು ಅದರಲ್ಲಿಯೂ ಜಂಗಮರು ಪಾಲ್ಗೊಳ್ಳುವರು ಕರಪಾಲ ಮೇಳವನ್ನು ನಡೆಸುವವರಿಗೆ ಕರಪಾಲದವರು ಎಂದೂ ಮುಖ್ಯ ಕಲಾವಿದರನ್ನು ಕರಪಾಲದಯ್ಯನೆಂದೂ ಕರೆಯುವರು ಕರಪಾಲವು ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಬಂದುದೆಂದು ಕಲಾವಿದರು ಹೇಳುವರು ಈ ಮೇಳದಲ್ಲಿ ಸಾಹಿತ್ಯ, ಸಂಗೀತ, ನೃತ್ಯ ಎಲ್ಲವೂ ಮುಖ್ಯವಾಗಿರುವುದು. ಮೂರು ಮಂದಿಯಿದ್ದರೆ ಈ ಮೇಳವನ್ನು ನಡೆಸಬಹುದು. ಒಬ್ಬ ಪ್ರಧಾನ ನಾಯಕನಾದರೆ ಮತ್ತಿಬ್ಬರು ಸಹಾಯಕರಾಗಿರುತ್ತಾರೆ. ಚಿದಾನಂದಮೂರ್ತಿ ಎಂ ರವರು ಕರಪಾಲವು ಕರಪಲ್ಲವ ಕರಪಲ್ಲವಾಗಿ ಕರಪಾಲ ಎಂದಾಗಿರಬಹುದು ಎಂಬ ಅಭಿಪ್ರಾಯ ಪಟ್ಟಿದ್ದಾರೆ. ಕರಪಲ್ಲವ ಎಂದರೆ ಸಂಸ್ಕೃತದಲ್ಲಿ ಕೈ ಸಂಜ್ಞೆ ಎಂಬ ಅರ್ಥವನ್ನು ಕೊಡುತ್ತದೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಚಿಕ್ಕಮಗಳೂರು ತಾಲೂಕಿನ ಜನಪದ ಕಲಾಪ್ರಕಾರಗಳು ಮತ್ತು ಸಾಂಸ್ಕೃತಿ ಆಚರಣೆಗಳು ತುಂಬಾ ವಿಶಿಷ್ಟವಾಗಿದ್ದು, ವಿವಿಧ ಕಾರಣಗಳಿಂದ ತಮ್ಮ ಅಸ್ಥಿತ್ವವನ್ನು ಕಳೆದುಕೊಳ್ಳುತ್ತಿವೆ. ಜನಪದ ಕಲೆ ಹಾಗೂ ಜಾನಪದ ಸಂಸ್ಕೃತಿಯಲ್ಲಿ ತೊಡಗಿಸಿಕೊಂಡಿರುವವರ ಪ್ರಮಾಣ ದಿನದಿಂದ ಕಡಿಮೆಯಾಗುತ್ತಿದ್ದು, ಇವುಗಳನ್ನು ಉಳಿಸಿ ಬೆಳಸಬೇಕಿರುವುದು ಸರ್ಕಾರ ಹಾಗೂ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಹಾಗೂ ಸಂಕಷ್ಟದಲ್ಲಿರುವ ಜನಪದ ಕಲಾವಿದರಿಗೆ ಪ್ರೋತ್ಸಾಹ ಕೊಟ್ಟು ಜಾನಪದಕಲೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿದರೆ ಮಾತ್ರ ಈ ವಿಶಿಷ್ಟ ಸಂಸ್ಕೃತಿ ಉಳಿಯಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಚೆನ್ನಣ್ಣ ವಾಲೀಕಾರ. (1991). ಒಂದು ಗ್ರಾಮದ ಜಾನಪದೀಯ ಅಧ್ಯಯನ. ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
- ದುರ್ಗಾದಾಸ್ ಕೆ. ಆರ್ ಮತ್ತು ಅರವಿಂದ ಮಾಲಗತ್ತಿ. (2001). 'ಬೇವು–ಬೆಲ್ಲ' ಡಾ. ಸೋಮಶೇಖರ ಇಮ್ರಾಪುರ ಅಭಿನಂದನ ಗ್ರಂಥ, ಸಂವಹನ ಪ್ರಕಾಶನ, ಮೈಸೂರು.
- ಗುರುಮೂರ್ತಿ ಕೆ.ಜಿ. (2012). ಜನಪದರ ರೀತಿ ನೀತಿಗಳು. ಸ್ನೇಹಾ ಪಬ್ಲಿಷಿಂಗ್ ಹೌಸ್, ಬೆಂಗಳೂರು.
- ಗುರುಮೂರ್ತಿ ಕೆ.ಜಿ. (1979). ಜನಪದ ಸಮಾಜ ಮತ್ತು ಸಂಸ್ಕೃತಿ. ಪಠ್ಯಪುಸ್ತಕ ನಿರ್ದೇನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಕೋಡಿರಾಮಪುರ ರಂಗಾರೆಡ್ಡಿ. (2010). ಜನಪದ ಸಂಸ್ಕೃತಿ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
- ಪುಟ್ಟಸ್ವಾಮಿ. (2007). ಜಾನಪದ ನಂಬಿಕೆ ಸಂಪ್ರದಾಯ ಮತ್ತು ಆಶಯಗಳು. ಸಂವಹನ ಪ್ರಕಾಶನ, ಶಿವರಾಂಪೇಟೆ, ಮೈಸೂರು.
- ಪುಟ್ಟಸ್ವಾಮಿ. (2007). ಜಾನಪದ ಸಂಬಂಧ. ಸಂವಹನ ಪ್ರಕಾಶನ, ಮೈಸೂರು.
- ರಾಗೌ. (2012). ಜಾನಪದ ಸಂಶೋಧನ. ತನುಮನ ಪ್ರಕಾಶನ, ಮೈಸೂರು.
- ಸಬರದ ವಿಜಯಶ್ರೀ. (2006). ಜಾನಪದ ಮತ್ತು ಮಹಿಳೆ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
- ಸೋಮಶೇಖರ ಇಮ್ರಾಪುರ. (2002). ಜಾನಪದ ಅವಲೋಕನ. ಸಿ.ವಿ.ಜಿ. ಪಬ್ಲಿಷಿಂಗ್ ಹೌಸ್, ಬೆಂಗಳೂರು.
- ಶಾರದಾ ಶಾಮಣ್ಣ. (1996). ಜಾನಪದ ಜಾಹ್ನವಿ. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.
- ವೀರಣ್ಣ ದಂಡೆ, ಶ್ರೀಪಾದ ಶೆಟ್ಟಿ (ಸಂ). (2006). ಸುವರ್ಣ ಜಾನಪದ ಲೇಖನಗಳು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.